ನಿಮ್ಮೊಡನೆ

# ನಾಲಗೆ ಬಿಗಿಯಾಗಿರಲಿ

> ಅಧಿಕಾರದಲ್ಲಿರುವ ಮಹಿಳೆಯರ ಮೇಲೆ ಹರಿಹಾಯುವುದು ಪುರುಷಪ್ರಧಾನ ವ್ಯವಸ್ಥೆಯ ಮೂಲ ಗುಣ. ಹೆಣ್ಣುಮಕ್ಕಳ ಅಧಿಕಾರ ಮತ್ತು ಶಕ್ತಿ ಎರಡನ್ನೂ ಪುರುಷರು ಸಹಿಸಲಾರರು. ಅವಕಾಶ ಸಿಕ್ಕಾಗಲೆಲ್ಲ ಹರಿಹಾಯುವುದು, ಹೀಗಳೆಯುವುದು, ತಮ್ಮ ಸ್ಥಾನಮಾನಕ್ಕೆ ಕುತ್ತು ಬರುವುದಾದರೆ ಕ್ಷಮೆ ಕೇಳುವ ನಾಟಕವನ್ನೂ ಮಾಡುತ್ತಾರೆ.

ನಾಲಗೆ ಸರಿಯಾಗಿರಬೇಕು. ಎಲ್ಲವನ್ನೂ ಯಾವಾಗಲೂ ನಾಲಗೆಯೇ ನಾಶ ಮಾಡಿದೆ. ನೀವು ಕ್ಷಮೆ ಕೋರಬಹುದು. ಆದರೆ ಬಿರುಕು ಹಾಗೆಯೇ ಉಳಿಯಲಿದೆ ಎಂಬುದನ್ನು ನೆನಪಿಡಿ. ನ್ಯಾ. ಎಂ. ನಾಗಪ್ರಸನ್ನ ಅವರು ಈಚೆಗೆ ಹೈಕೋರ್ಟ್‌ನಲ್ಲಿ ಕಾಂಗ್ರೆಸ್ ಮುಖಂಡರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಶಿಡ್ಲಘಟ್ಟದ ಸ್ಥಳೀಯ ಮುಖಂಡ ಬಿ.ವಿ.ರಾಜೀವ್‌ಗೌಡ ಪೌರಾಯುಕ್ತೆಗೆ ಅವಾಚ್ಯ ಪದಗಳಲ್ಲಿ ನಿಂದಿಸಿ ಬೆದರಿಕೆ ಒಡ್ಡಿದ ಆರೋಪದ ಮೇಲೆ ಎಫ್‌ಐಆರ್ ದಾಖಲಾಗಿದೆ. ಇದನ್ನು ರದ್ದುಗೊಳಿಸಬೇಕು ಎಂದು ಅವರು ಹೈಕೋರ್ಟ್‌ಗೆ ಕೋರಿದ್ದರು. ಈ ಪ್ರಕರಣದ ವಿಚಾರಣೆಯಲ್ಲಿ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಖಡಾಮುಡಿ ಪದಗಳಲ್ಲಿ ತರಾಟೆಗೆ ತೆಗೆದುಕೊಂಡರು. ಅವರ ಮಾತುಗಳು ಹೆಣ್ಣುಮಕ್ಕಳನ್ನು ನಿಂದಿಸಿ, ನಂತರ ತಮ್ಮ ಹಿತಾಸಕ್ತಿಗಾಗಿ ಕ್ಷಮೆಯಾಚಿಸುವಂಥವರಿಗೆ ನೀಡಿದ ಚಾಟಿ ಏಟಾಗಿದೆ.

ನಾಲಗೆ ಎಲ್ಲವನ್ನೂ ಹಾಳು ಮಾಡುತ್ತದೆ. ಬರೀ ಮಾತುಗಳಿಂದಲೇ ಅದೆಷ್ಟೋ ಕೆಡುಕಾಗಿದೆ. ಸಮುದಾಯದ ಒಳಿತನ್ನು ಬಯಸುವಂಥ ಮಾತಾಡದಿದ್ದರೆ ಕೆಟ್ಟದ್ದನ್ನೂ ಮಾತಾಡಬಾರದು. ಆದರೆ ಮಹಿಳೆ, ಮಹಿಳೆಯರ ಘನತೆಯನ್ನು ತಡವುವಂಥ ಮಾತುಗಳನ್ನಾಡುವುದರಲ್ಲಿ ರಾಜಕೀಯ ಮುಖಂಡರು ಹಿಂದೆ ಬೀಳುವುದಿಲ್ಲ. ಏನು ಹೇಳಿದರೂ ನಡೆದೀತು ಎಂಬಂಥ ಉಡಾಫೆತನ ಅವರ ನಿಲುವಿನಲ್ಲಿ ಎದ್ದುಕಾಣುತ್ತದೆ.

ಈ ಹಿಂದೆ ಉತ್ತರ ಕನ್ನಡ ಜಿಲ್ಲೆಗೆ ಆಸ್ಪತ್ರೆ ಕೇಳಿದ ಪತ್ರಕರ್ತೆಗೆ ನಿನಗೆ ಹೆರಿಗೆ ಮಾಡಿಸಬೇಕಿದೆಯೇ ಎಂದು ಕೇಳಿ ಆ ಜಿಲ್ಲೆಯ ಶಾಸಕರು ಕುಹಕ ನಗೆ ನಕ್ಕಿದ್ದರು. ಜೊತೆಗಿದ್ದ ಗಂಡಸರೂ ಆ ನಗೆಯಲ್ಲಿ ಪಾಲ್ಗೊಂಡಿದ್ದರು. ಒಂದು ಕೀಳುಮಟ್ಟದ ಇಂಥ ಪ್ರತಿಕ್ರಿಯೆಯನ್ನು ಎದುರಿಸುವ ಯಾವ ಪುರುಷೋತ್ತಮರೂ ಆ ಗುಂಪಿನಲ್ಲಿರಲಿಲ್ಲ. ಬಳೆ ತೊಡುವ ಬಗ್ಗೆ, ಹೆಣ್ಣುಮಕ್ಕಳ ಬಣ್ಣ, ಮೈಮಾಟದ ಬಗ್ಗೆ ಸರಾಗವಾಗಿ ನಗೆಯ ಸರಕಾಗಿಸುವುದು ಸಹಜವಾಗಿದೆ.

ಒಂದು ಸಮಾಜದಲ್ಲಿ ಮಹಿಳೆಯರನ್ನು ಗೌರವದಿಂದ ಕಾಣುವ ಸಮಯ ಬಂದಾಗಲೇ ಸರ್ವೋದಯವಾಗುತ್ತದೆ ಎಂದು ಗಾಂಧೀಜಿ ಅಭಿಪ್ರಾಯ ಪಟ್ಟಿದ್ದರು. ಮಹಿಳೆಯರನ್ನು ಗೌರವದಿಂದ ಕಾಣುವಂಥ ರಾಮರಾಜ್ಯ ಯಾವ ಪಕ್ಷದಿಂದಲೂ ನಿರ್ಮಿಸುವುದು ಅಸಾಧ್ಯವಾಗಿದೆ.

ಲಿಂಗಾಧಾರಿತ ತರತಮ ಅದೆಷ್ಟು ಬೇರೂರಿದೆ ಎಂದರೆ ಇಂಥ ಪ್ರಕರಣಗಳಾದಾಗ ಅದನ್ನೊಂದು ಸುದ್ದಿ ಎಂಬಂತೆ ಮಾತ್ರ ಕಣ್ಣಾಡಿಸಿ ಸುಮ್ಮನಾಗುವುದು ಸಹಜವಾಗಿದೆ. ಕೆಟ್ಟ ಬೈಗುಳ, ಅವಾಚ್ಯ ಮಾತು, ಹೀಗಳೆಯುವಿಕೆ ಇವೆಲ್ಲವೂ ಮಹಿಳೆಯರನ್ನು ಉದ್ದೇಶಿಸಿಯೇ ಮಾತನಾಡಿದರೂ ಆಡಿದ ವ್ಯಕ್ತಿಯ ವ್ಯಕ್ತಿತ್ವದ ಕುಂದು ಅದು ಎಂಬ ಸೂಕ್ಷ್ಮ ವಿಷಯ ಯಾಕೆ ಯಾರಿಗೂ ಅರ್ಥವಾಗುತ್ತಿಲ್ಲ. ಇಂಥವೆಲ್ಲವೂ ಸಹಜ ಎಂಬಂತಹ ಸ್ಥಿತಿ ನಿರ್ಮಿಸಿದ್ದೂ ಇಂಥ ರಾಜಕಾರಣಿಗಳೇ. ಜನ ಸಮುದಾಯದ ನಡುವೆ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅಷ್ಟೇ ಏಕೆ, ವಿಧಾನ ಸಭೆ ಪರಿಷತ್ತಿನ ಅಧಿವೇಶನಗಳಲ್ಲಿಯೂ ರಾಜಾರೋಷವಾಗಿ ಜನನಾಯಕರು ತಮ್ಮ ನಾಲಗೆಯನ್ನು ಸಡಿಲಬಿಡುತ್ತಾರೆ. ಆಳ್ವಿಕೆಯ ನಶೆಯಲ್ಲಿರುವ ಈ ನಾಯಕರಿಗೆ ಅವರನ್ನು ಆಳುವುದು ಅವರ ಮಾತುಗಳೇ ಎಂಬ ಪರಿಜ್ಞಾನ ಇರಬೇಕು. ಮಾತಾಡುವ ಮೊದಲು ಮಾತ್ರ ನಾವು ಮಾತನ್ನು ಆಳುತ್ತೇವೆ. ನಂತರ ಮಾತು ನಮ್ಮನ್ನು ಆಳುತ್ತದೆ ಎಂಬ ಫ್ರೆಂಚ್ ಗಾದೆ ಒಂದಿದೆ. ಈ ಸರಳ ವಿಷಯವನ್ನು ನೆನಪಿಡದೆ ಆಮೇಲೆ ಕ್ಷಮೆ ಕೇಳುವ ನಾಟಕವಾಡುತ್ತಾರೆ ನಾಯಕರು.

ಸಾರ್ವಜನಿಕ ಕ್ಷಮೆ ಕೇಳುವುದೆಂದರೆ ಮಾಡಿದ ತಪ್ಪಿಗೆ ಪಶ್ಚಾತ್ತಾಪಪಟ್ಟು, ಪ್ರಾಯಶ್ಚಿತ್ತದ ನುಡಿಯಾಗಿ ಕ್ಷಮೆ ಆಚೆ ಬರಬೇಕು. ಅದು ತೀರ ಒಂದು ಪತ್ರಿಕಾಹೇಳಿಕೆಯಂತೆ ದಾಖಲಾದರೆ ಕ್ಷಮೆ ಕೇಳಿದ ಮನುಷ್ಯ ಬದಲಾಗುವ ಸಾಧ್ಯತೆಯೇ ಇರುವುದಿಲ್ಲ. ಕ್ಷಮೆ ಕೋರಿದ ನಂತರವೂ ಉಳಿಯುವ ಬಿರುಕು ಅಂದರೆ ಅದೇನೆ. ಮನುಷ್ಯ ಒಬ್ಬ ಘನತೆಯ ಮಾನವನಾಗಿ ಬದಲಾಗದೇ ಇರುವುದು. ಶಬ್ದಾಡಂಬರದಲ್ಲಿ ಶಿಕ್ಷೆ ಮತ್ತು ದಂಡಗಳು, ಕ್ಷಮೆ ಕೋರಿಕೆಯ ವಾಗ್ದಾನ ಹಾಗೂ ವಾಗ್ದಂಡನೆಗಳು ಅಧಿಕಾರದ ಮದದಲ್ಲಿರುವವರ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡವು.

ಹೀಗಳೆದು ಕ್ಷಮೆ ಕೇಳುವ ನಾಟಕವಾಡುವ ಎಲ್ಲ ಮುಖಂಡರಿಗೂ ಇದು ಎಚ್ಚರಿಕೆಯ ಮಾತು. ಮಾತುಗಳಿಂದಾಗಿ ಕಂದಕ ಉಂಟಾಗುತ್ತದೆ ಎಂಬುದು ಸ್ವಸ್ಥ ಸಮಾಜದ ಸಂರಚನೆಗಿರುವ ಕಾಳಜಿ. ಆ ಕಾಳಜಿಯೇ ಮುಖಂಡರಲ್ಲಿ ಕಾಣದಿದ್ದಲ್ಲಿ ಅಧಿಕಾರ ಸೇವೆಗೆ ಬೇಕೆ ಅಥವಾ ಆಳ್ವಿಕೆಗೆ ಬೇಕೆ ಎಂಬ ಪ್ರಶ್ನೆ ಉಳಿಸುತ್ತದೆ. ಜನಪರವಾಗಿರುವುದೆಂದರೆ ಮಹಿಳೆಯರ ಸುರಕ್ಷೆ ಮತ್ತು ಘನತೆಯನ್ನು ಕಾಪಿಡುವಂತೆ ಮಾಡುವುದೇ ಆಗಿದೆ. ಮಹಿಳೆಯರನ್ನು ಹೀಗಳೆಯುವವರನ್ನು ಹೆಮ್ಮೆಯಿಂದ ನೋಡುವ ಪುರುಷರ ಮನೋಸ್ಥಿತಿ ಬದಲಾಗುವವರೆಗೂ ಆಳುವುದೇ ಪರಮಗುರಿ ಎಂಬಂಥ ಪಾಳೇಗಾರಿಕೆಯ ಮನೋಭಾವದ ನಾಯಕರೇ ಗೆಲ್ಲುತ್ತಾರೆ. ಉಳಿದವರೆಲ್ಲರನ್ನೂ ಊಳಿಗಮಾನ್ಯ ಪದ್ಧತಿಯ ಗುಲಾಮರಂತೆಯೇ ಕಾಣುತ್ತಾರೆ. ನಮಗೆಲ್ಲ ಬೇಕಿರುವುದು ಜನರನ್ನು ನಾಗರಿಕರಂತೆ ಕಾಣುವ, ಸಾಮಾನ್ಯರನ್ನೂ ಗೌರವಿಸುವ ನಾಯಕರು. ಲಿಂಗ ಸಂವೇದನೆಯ ಪಾಠ ಶೈಕ್ಷಣಿಕ ಪಠ್ಯಕ್ರಮದಲ್ಲಿ ಅಷ್ಟೇ ಅಲ್ಲ, ಅಧಿಕಾರಿವರ್ಗ ಹಾಗೂ ಶಕ್ತಿ ಸೌಧಗಳಲ್ಲಿಯೂ ಆಗಬೇಕಿದೆ.

■ **ರಶ್ಮಿ ಎಸ್**



ವಿಜಯ